(ತೋಟಗಾರಿಕೆ ಇಲಾಖೆ)

ಸಂಖ್ಯೆ:ತೋಇ:ಆ:ಸಿ:ವಿನಿ7:145:17-18

ತೋಟಗಾರಿಕೆ ನಿರ್ದೇಶನಾಲಯ,
ಲಾಲ್ ಬಾ ಗ್, ಬೆಂಗಳೂರು-04.
ದಿನಾಂಕ:- 15 .03.2018.

**"ಸುತ್ತೋಲೆ"**

ವಿಷಯ:ಮಾಹಿತಿ ಹಕ್ಕು ಅಧಿನಿಯಮ,2005ರ ಸೆಕ್ಷನ್ 4(1)(ಎ) ಮತ್ತು 4(1)(ಬಿ)ಅಡಿ ಸ್ವಯಂಪ್ರೇರಣೆಯಿಂದ ಮಾಹಿತಿಯನ್ನು ಇಲಾಖಾ ಅಂತರ್ಜಾಲತಾಣದಲ್ಲಿ ಪ್ರಕಟಿಸುವ ಬಗ್ಗೆ. ಮತ್ತು 4(1)(ಎ) ಮತ್ತು 4(1)(ಬಿ)ರ ಅನುಷ್ಠಾನದ ವಿವರಗಳನ್ನು ವರದಿ ಮಾಡುವ ಕುರಿತು.

ಉಲ್ಲೇಖ:1)ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, (ಜನಸ್ಪಂದನ )ಬೆಂಗಳೂರು,ರವರ ಸುತ್ತೋಲೆಯ ಸಂಖ್ಯೆ:ಸಿಆಸುಇ:28:ಆರ್ ಟಿ ಐ:2012, ದಿನಾಂಕ:29.04.2013.

2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, (ಆಡಳಿತ ಸುಧಾರಣೆ- ಜನಸ್ಪಂದನ )ಬೆಂಗಳೂರು,ರವರ ಸುತ್ತೋಲೆಯ ಸಂಖ್ಯೆ:ಸಿಆಸುಇ:140:ಆರ್ ಟಿ ಐ: 2012, ದಿನಾಂಕ:19.11.2012.

--****--

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ಹಾಗೂ ಉಲ್ಲೇಖ(2)ರ ಸರ್ಕಾರದ ಸುತ್ತೋಲೆಗಳಲ್ಲಿ ನಿರ್ದೇಶಿಸಿದಂತೆ ಪ್ರತಿ ವರ್ಷದಂತೆ, ಮಾಹಿತಿ ಹಕ್ಕು ಅಧಿನಿಯಮ, 2005ರ ಸೆಕ್ಷನ್ 4(1)(ಎ) ರ ಅನ್ವಯ ಕಡತಗಳನ್ನು (Cataloguing, Indexing)ವಿಷಯಸೂಚಿಯೊಂದಿಗೆ ಗಣಕೀಕರಣಗೊಳಿಸಿ ಪ್ರಕಟಿಸುವುದು ಮತ್ತು 4(1)(ಬಿ) ರ ಅನ್ವಯ ನಮೂನೆ 1 ರಿಂದ 17 ರವರೆಗಿನ ಅಂಶಗಳ ಮಾಹಿತಿಗಳನ್ನು 18-19 ನೇ ಸಾಲಿಗೆ ಸಂಬಂಧಿಸಿದಂತೆ ತಯಾರಿಸಿ ನಿಮ್ಮ ಕಛೇರಿಗಳ ಅಂತರ್ಜಾಲತಾಣದಲ್ಲಿ ಮತ್ತು ಸೂಚನಾ ಫಲಕದಲ್ಲಿ ಪ್ರಕಟಿಸಿ ಕ್ರಮವಹಿಸಲು ಈ ಮೂಲಕ ತಿಳಿಸಲಾಗಿದೆ. ಅರ್ಜಿದಾರರು ಮಾಹಿತಿ ಹಕ್ಕು ಅಧಿನಿಯಮ ಅಡಿ ಈ ಬಗ್ಗೆ ಮಾಹಿತಿ ಕೋರಿದಾಗ ತಪ್ಪದೆ ಮಾಹಿತಿ ಒದಗಿಸಲು ಸಹ ಸೂಚಿಸಲಾಗಿದೆ.

ಮುಂದುವರೆದು, ಈ ಬಗ್ಗೆ ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮೇಲಿನಂತೆ 18-19 ನೇ ಸಾಲಿಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ತಯಾರಿಸಿ Soft Copy (Pendrive/C.D)ಗಳನ್ನು ಮಾತ್ರ ನಿರ್ದೇಶಕರ ಕಛೇರಿಯ ಅಧೀನ ಇ-ಆಡಳಿತ ವಿಭಾಗದಲ್ಲಿ ಇರುವ ಶ್ರೀ.ಹೆಚ್.ಕೆ.ಅನಂತಮೂರ್ತಿ, ಸಹಾಯಕ ತೋಟಗಾರಿಕೆ ನಿರ್ದೇಶಕರು, ಇ-ಆಡಳಿತ ಲಾಲ್ ಬಾಗ್, ಬೆಂಗಳೂರು ರವರಿಗೆ ಇಲಾಖಾ ಅಂತರ್ಜಾಲತಾಣದಲ್ಲಿ ಪ್ರಕಟಿಸುವ ಸಲುವಾಗಿ ಕಳುಹಿಸಲು ಈ ಮೂಲಕ ಸೂಚಿಸಲಾಗಿದೆ.

**ಮುಂದುವರೆದು, ಈ ಬಗ್ಗೆ ಯಾವುದೇ ಮ್ಯಾನುಯಲ್ ಅಥವಾ ಹಾರ್ಡ್ ಕಾಪಿಯನ್ನು ನಿರ್ದೇಶಕರ ಕಛೇರಿಗೆ ಕಳುಹಿಸಬಾರದೆಂದು ಸಹ ತಿಳಿಸಿದೆ.**

15/03/18.
ನಿರ್ದೇಶಕರ ಪರವಾಗಿ

ಪ್ರತಿಗಳನ್ನು:

1. ಇಲಾಖೆಯ ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿ/ಎಲ್ಲಾ ಮೇಲ್ಮನವಿ ಪ್ರಾಧಿಕಾರಿ,ರವರುಗಳಿಗೆ.
2. ವ್ಯವಸ್ಥಾಪಕ ನಿರ್ದೇಶಕರು,ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆನಿಗಮ ನಿಯಮಿತ, ಕಾವೇರಿ ಭವನ, ಎಫ್-ಬ್ಲಾಕ್, ಎರಡನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು, ರವರ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸುತ್ತಾ ಸದರಿ

ಪ್ರ.ತಿ.ನೋ

ಮಾಹಿತಿಗಳನ್ನು ಇಲಾಖಾ ಅಂತರ್ಜಾಲತಾಣದಲ್ಲಿ ಪ್ರಕಟಿಸುವುದರ ಜೊತೆಗೆ ನಿಮ್ಮ ನಿಗಮದ ಅಂತರ್ಜಾಲತಾಣದಲ್ಲಿ ಪ್ರಕಟಿಸಲು ಕ್ರಮವಹಿಸುವುದು.

3. ವ್ಯವಸ್ಥಾಪಕ ನಿರ್ದೇಶಕರು, ಹಾಪ್ ಕಾಮ್ಸ್,ಡಾ:ಎಂ.ಹೆಚ್.ಮರಿಗೌಡ ರಸ್ತೆ, ಲಾಲ್ ಬಾಗ್, ಬೆಂಗಳೂರು, ರವರ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸುತ್ತಾ ಸದರಿ ಮಾಹಿತಿಗಳನ್ನು ಇಲಾಖಾ ಅಂತರ್ಜಾಲತಾಣದಲ್ಲಿ ಪ್ರಕಟಿಸುವುದರ ಜೊತೆಗೆ ನಿಮ್ಮ ಸಂಸ್ಥೆಯ ಅಂತರ್ಜಾಲತಾಣದಲ್ಲಿ ಪ್ರಕಟಿಸಲು ಕ್ರಮವಹಿಸುವುದು.

4. ವ್ಯವಸ್ಥಾಪಕ ನಿರ್ದೇಶಕರು, ಕೆ.ಹೆಚ್.ಎಫ್,ಬಿನ್ನಿಮಿಲ್ ರಸ್ತೆ, ಬೆಂಗಳೂರು, ರವರ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸುತ್ತಾ ಸದರಿ ಮಾಹಿತಿಗಳನ್ನು ಇಲಾಖಾ ಅಂತರ್ಜಾಲತಾಣದಲ್ಲಿ ಪ್ರಕಟಿಸುವುದರ ಜೊತೆಗೆ ನಿಮ್ಮ ಸಂಸ್ಥೆಯ ಅಂತರ್ಜಾಲತಾಣದಲ್ಲಿ ಪ್ರಕಟಿಸಲು ಕ್ರಮವಹಿಸುವುದು.

5. ವ್ಯವಸ್ಥಾಪಕ ನಿರ್ದೇಶಕರು,ಕರ್ನಾಟಕ ದ್ರಾಕ್ಷರಸ ಮಂಡಳಿ,ಇಂದಿರಾ ಪ್ರಿಯದರ್ಶಿನಿ ಕಟ್ಟಡ,ಮಕ್ಕಳ ಗ್ರಂಥಾಲಯದ ಹತ್ತಿರ, ಕಬ್ಬನ್ ಪಾರ್ಕ್, ಬೆಂಗಳೂರು, ರವರ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸುತ್ತಾ ಸದರಿ ಮಾಹಿತಿಗಳನ್ನು ಇಲಾಖಾ ಅಂತರ್ಜಾಲತಾಣದಲ್ಲಿ ಪ್ರಕಟಿಸುವುದರ ಜೊತೆಗೆ ನಿಮ್ಮ ಮಂಡಳಿಯ ಅಂತರ್ಜಾಲತಾಣದಲ್ಲಿ ಪ್ರಕಟಿಸಲು ಕ್ರಮವಹಿಸುವುದು.

6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ,ನೇಕಾರ ಭವನ, ವಿದ್ಯಾನಗರ ಹುಬ್ಬಳ್ಳಿ, ರವರ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸುತ್ತಾ ಸದರಿ ಮಾಹಿತಿಗಳನ್ನು ಇಲಾಖಾ ಅಂತರ್ಜಾಲತಾಣದಲ್ಲಿ ಪ್ರಕಟಿಸುವುದರ ಜೊತೆಗೆ ನಿಮ್ಮ ಮಂಡಳಿಯ ಅಂತರ್ಜಾಲತಾಣದಲ್ಲಿ ಪ್ರಕಟಿಸಲು ಕ್ರಮವಹಿಸುವುದು.

7. ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಲೆಕ್ಕಾಧಿಕಾರಿಗಳು, ದಿ-ನರ್ಸರಿಮೆನ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ಬೆಂಗಳೂರು, ರವರಿಗೆ ರವರ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸುತ್ತಾ ಸದರಿ ಮಾಹಿತಿಗಳನ್ನು ಇಲಾಖಾ ಅಂತರ್ಜಾಲತಾಣದಲ್ಲಿ ಪ್ರಕಟಿಸುವುದರ ಜೊತೆಗೆ ನಿಮ್ಮ ಸಂಸ್ಥೆಯ ಅಂತರ್ಜಾಲತಾಣದಲ್ಲಿ ಪ್ರಕಟಿಸಲು ಕ್ರಮವಹಿಸುವುದು.

8.ಶ್ರೀ.ಹೆಚ್.ಕೆ.ಅನಂತಮೂರ್ತಿ, ಸಹಾಯಕ ತೋಟಗಾರಿಕೆ ನಿರ್ದೇಶಕರು, ತೋಟಗಾರಿಕೆ ಜಂಟಿ ನಿರ್ದೇಶಕರ ಕಛೇರಿ ಇ-ಆಡಳಿತ, ಯೋಜನೆ ಉಸ್ತುವಾರಿ ಘಟಕ, ಲಾಲ್ ಬಾಗ್, ಬೆಂಗಳೂರು, ರವರಿಗೆ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸುತ್ತಾ, ಇಲಾಖೆಯ ಅಧೀನ ಬರುವ ಕಛೇರಿಗಳು ಕಳುಹಿಸುವ ಮಾಹಿತಿಗಳನ್ನು ಕನ್ನಡ ಭಾಷೆಯಲ್ಲಿ ಇಲಾಖಾ ಅಂತರ್ಜಾಲತಾಣದಲ್ಲಿ ಪ್ರಕಟಿಸಿ ವರದಿ ನೀಡಲು ಸೂಚಿಸಿದೆ.

9.ಅಧೀಕ್ಷಕರು, ದಾಖಾಲಾತಿ ವಿಭಾಗ, ಲಾಲ್ ಬಾಗ್, ಬೆಂಗಳೂರು,ರವರಿಗೆ ಕಳುಹಿಸುತ್ತಾ 4(1) (ಎ)ರ ಬಗ್ಗೆ ಸೂಕ್ತ ಕ್ರಮಕ್ಕೆ ಕಳುಹಿಸಿದೆ. ಹಾಗೂ ಈ ಬಗ್ಗೆ ತಕ್ಷಣವೇ ಕ್ರಮವಹಿಸಿ ವರದಿ ನೀಡಲು ಸೂಚಿಸಿದೆ.

10.ಸಹಾಯಕ ತೋಟಗಾರಿಕೆ ಅಧಿಕಾರಿ, ಗ್ರಂಥಾಲಯ,/ ಅಧೀಕ್ಷಕರು,ಗ್ರಂಥಾಲಯ,ಲಾಲ್ ಬಾಗ್,ಬೆಂಗಳೂರು,ರವರಿಗೆ ಕಳುಹಿಸುತ್ತಾ ಇಲಾಖೆಯ ಅಧೀನ ಬರುವ ನಿಗಮ/ ಮಂಡಳಿ/ ಸ್ಥಳೀಯ ಸಂಸ್ಥೆಗಳಿಗೆ , ಸಂಬಂಧಿಸಿದಂತೆ ಮಾಹಿತಿಯನ್ನು ಇಲಾಖಾ ಅಂತರ್ಜಾಲತಾಣದಲ್ಲಿ ಹಾಗೂ ಸದರಿ ನಿಗಮ/ಮಂಡಳಿ/ ಸಂಸ್ಥೆಗಳಲ್ಲಿನ ಅಂತರ್ಜಾಲತಾಣದಲ್ಲಿ ಪ್ರಕಟಿಸಿದ ಬಗ್ಗೆ ವರದಿಯನ್ನು ನೀಡಲು ಈ ಮೂಲಕ ತಿಳಿಸಿದೆ.

11.ಕಛೇರಿ ಪ್ರತಿ.